ಇ) ಹೆರೂರು ಗ್ರಾಮದಿಂದ ಮಜೂರುವರೆಗಿನ ನೇರ ರಸ್ತೆಯ ಉದ್ದವು 4.00ಕಿ.ಮೀ.ಇರುತ್ತದೆ.ಇದರಲ್ಲಿ ಹೆರೂರಿನಿಂದ 2.00ಕಿ.ಮೀ. ಉದ್ದಕ್ಕೆ ನಬಾರ್ಡ್ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾಗಿದ್ದು ಡಾಂಬರು ಮೇಲ್ಮೈ ಹೊಂದಿರುತ್ತದೆ.ಇನ್ನುಳಿದ 2.00ಕಿ.ಮೀ. ಉದ್ದದಲ್ಲಿ 0.50ಕಿ.ಮೀ. ಉದ್ದವು ಜಲ್ಲಿ ಮೇಲ್ಮೈ ಹಾಗೂ 1.50ಕಿ.ಮೀ. ಉದ್ದವು ಗ್ರಾವೆಲ್ ಮೇಲ್ಮೈ ಹೊಂದಿರುತ್ತದೆ. ಇದಲ್ಲದೇ ಸರಪಳಿ 2.50ಕಿ.ಮೀ ನಲ್ಲಿ 15ಮೀಟರ್ ಉದ್ದದ (7.5 ಮೀಟರ್‌ನ 2 ಸ್ಪ್ಯಾನ್‌ಗಳು) ಸೇತುವೆ ನಿರ್ಮಿಸಬೇಕಾಗಿದ್ದು, ಒಟ್ಟಾರೆ ಅಭಿವೃದ್ಧಿಗೆ ರೂ.50.00ಲಕ್ಷಗಳ ಅಗತ್ಯವಿದ್ದು, ಪ್ರಸ್ತುತ ಸಾಲಿನಲ್ಲಿ ಈ ಮೊತ್ತದ ಅನುದಾನವನ್ನು ಒದಗಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ(ಬಸವ ಕಲ್ಯಾಣ)112(339)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಆರಂಭಿಸಲು ಅನುಮತಿ ನೀಡಲಾಗಿದೆ(ಅನುಮತಿ ನೀಡಿರುವ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

2) ಮೇಲ್ಕಂಡ ಶಾಲೆಗಳಿಗೆ ಅನುಮತಿ ನೀಡುವಾಗ ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಹಾಗಿದ್ದಲ್ಲಿ, ನಂಜುಂಡಪ್ಪ ಸಮಿತಿಯ ವರದಿ ಶಿಫಾರಸ್ಸಿನ ಅನ್ವಯ ಹೈದರಾಬಾದ್ ಕರ್ನಾಟಕ ಪ್ರದೇಶದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಅವಶ್ಯಕತೆ ಇರುತ್ತದೆ;

4)ಮುಂಬರುವ ದಿನಗಳಲ್ಲಿ ಈ ತಾರತಮ್ಯವನ್ನು ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಎಸ್.ಬಸವರಾಜ ಹೊರಟ್ಟಿ

1)ಸರ್ಕಾರಿ ಪ್ರಾಥಮಿಕ ಶಾಲೆಗಳು –79

ಸರ್ಕಾರಿ ಪ್ರೌಢ ಶಾಲೆಗಳು –199

ವಿಧಾನಸಭಾ ಕ್ಷೇತ್ರವಾರು ಪಟ್ಟಿ ಲಗತ್ತಿಸಿದೆ.

2) ಕಡೆಗಣಿಸಿರುವುದಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶದ ಗುಲ್ಬರ್ಗಾ ವಿಭಾಗಕ್ಕೆ ಒಟ್ಟಾರೆ 35 ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಇದರಲ್ಲಿ 2007–08ನೇ ಸಾಲಿಗೆ ಬೀದರ್ ಜಿಲ್ಲೆಗೆ 02 ಪ್ರೌಢ ಶಾಲೆ ಮಂಜೂರಾಗಿವೆ. ಪ್ರಾಥಮಿಕ ಶಾಲೆಗಳು ಅಗತ್ಯವಿರುವುದಿಲ್ಲ.

3) ಹೈದರಾಬಾದ್ ಕರ್ನಾಟಕ ಪ್ರದೇಶದ ಗುಲ್ಬರ್ಗಾ ವಿಭಾಗದ ಜಿಲ್ಲೆಗಳಿಗೆ ಅಗತ್ಯವಿರುವ ಪ್ರೌಢ ಶಾಲೆಗಳ ವಿವರ4ದ ಪಟ್ಟಿಯನ್ನು ಲಗತ್ತಿಸಿದೆ.

4)ಆಯವ್ಯಯದಲ್ಲಿ ಲಭ್ಯವಿರುವ ಅವಕಾಶದಂತೆ ಹಾಗೂ ಸ್ಥಳೀಯ ಅಗತ್ಯತೆಗಳನ್ನು ಪರಿಗಣಿಸಿ ಹಂತ ಹಂತವಾಗಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಪ್ರಕ್ರಿಯೆ ನಡೆಯುತ್ತದೆ. ಇದೊಂದು ಸತತವಾದ ಪ್ರಕ್ರಿಯೆಯಾಗಿದೆ.

ಹೈದರಾಬಾದ್ ಕರ್ನಾಟಕ ಗುಲ್ಬರ್ಗಾ ವಿಭಾಗದ ಜಿಲ್ಲೆಗಳಿಗೆ ಅಗತ್ಯವಿರುವ ಪ್ರೌಢ ಶಾಲೆಗಳ ಸಂಖ್ಯೆ

ಜಿಲ್ಲೆ	ಹಿಂದುಳಿದ	ಪ್ರಸ್ತಾವನೆಗಳ ಸಂಖ್ಯೆ	ಅತಿ ಹಿಂದುಳಿದ	ಪ್ರಸ್ತಾವನೆಗಳ ಸಂಖ್ಯೆ	ಅತ್ಯಂತ ಹಿಂದುಳಿದ	ಪ್ರಸ್ತಾವನೆಗಳ ಸಂಖ್ಯೆ
ಗುಲ್ಬರ್ಗಾ	02	17	05	27	–	–
ಯಾದಗಿರಿ	–	–	04	03	–	–
ರಾಯಚೂರು	–	–	04	24	01	04
ಬೀದರ್	–	–	03	04	–	–
ಕೊಪ್ಪಳ	01	07	02	12	01	11
ಬಳ್ಳಾರಿ	–	–	02	07	03	04
ಒಟ್ಟು	**03**	**24**	**20**	**77**	**05**	**05**

ಹಿಂದುಳಿದ, ಅತಿ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳನ್ನು ಹೊರತುಪಡಿಸಿದ ತಾಲ್ಲೂಕುಗಳಲ್ಲಿ 38 ಶಾಲೆಗಳು (ಅಂದಾಜು) ಬೇಕಾಗುತ್ತದೆ.